

ಎನ್ನುವ ಅರ್ಥದಲ್ಲಿ ಶಾಂತಿ ಕೇಳಿದಳು.

'ನಮ್ಮಿಬ್ಬರಿಗೂ ಮದುವೆಯಾಗಿದೆ. ಇಬ್ಬರಿಗೂ ಮಕ್ಕಳಿವೆ. ಆದರೆ ನಾವು ಪ್ರೀತಿಯಲ್ಲಿದ್ದೇವೆ' – ಸುಧಾ ಈಗ ಶಾಂತಿಯನ್ನು ಕಿಚಾಯಿಸುವ ದನಿಯಲ್ಲಿ ಹೇಳಿದಳು.

ಶಾಂತಿ ಅರ್ಥವಾಗದೆ ತಲೆ ಕೊಡವಿದ್ದಳು.

2

ಸುಧಾಳಿಗೆ ಮದುವೆಯಾದ ಹೊಸದರಲ್ಲಿ ಎಲ್ಲವೂ ಸರಿಯಿರುವಂತೆಯೇ ಪ್ರಪಂಚಕ್ಕೆ ಕಂಡಿತ್ತು.

ನಂತರ ಅವಳ ಸಂಸಾರ ದೂರದ ಮಧ್ಯಪ್ರದೇಶಕ್ಕೆ ಸ್ಥಳಾಂತರವಾಗಿತ್ತು. ಸುಧಾಳ ಮೊದಲ ಗಂಡುಕೂಸು ಹುಟ್ಟಿದ ನಾಲ್ಕು ದಿನಕ್ಕೇ ಉಸಿರಾಟದ ತೊಂದರೆಯಿಂದ ಅಸುನೀಗಿತ್ತು. ಅದು ಸುಧಾಳನ್ನು ಪೂರ್ಣವಾಗಿ ಧೃತಿಗೆಡಿಸಿತ್ತು. ಅವಳು ಖಿನ್ನತೆಗೆ ಜಾರಿದ್ದಳು. ಆ ಸಮಯದಲ್ಲಿ ಶಾಂತಿ ಅವಳನ್ನು ಮಾತಾಡಿಸಲು ಕೂಡ ಸಾಧ್ಯವಿರಲಿಲ್ಲ. ಸುಧಾ ಎಲ್ಲರನ್ನೂ ದೂರ ಮಾಡಿಕೊಂಡು ಹೆದರಿಕೆಯನ್ನು ಹುಟ್ಟಿಸುವಂತೆ, ಯಾವುದೋ ಕತ್ತಲ ಕೂಪಕ್ಕೆ ಜಾರಿದ ಹಾಗೆ ವರ್ತಿಸಿದ್ದಳು.

ಬರೀ ಒಂದು ಮಗುವಿನ ವಿಚಾರಕ್ಕೆ ತನ್ನ ಗೆಳತಿ ಈ ಮಟ್ಟಿಗೆ ಕುಸಿದಳೇ ಎಂದು ಶಾಂತಿ ಆಶ್ಚರ್ಯಪಟ್ಟಿದ್ದಳು. ಸುಧಾಳ ಎರಡನೆಯ ಮಗು ಕೆಲವು ತೊಂದರೆಗಳಿಂದ ಏಳು ತಿಂಗಳಿಗೇ ಹುಟ್ಟಿ ಇನ್ನಿಲ್ಲದ ತೊಂದರೆ ಅನುಭವಿಸಿದ್ದಳು. ಮಗು ಉಳಿದದ್ದೇ ದೊಡ್ಡ ವಿಚಾರ ಎಂದುಕೊಳ್ಳುವಾಗಲೇ ಸುಧಾ ಮತ್ತೊಂದು ವಿಚಾರ ಹೊರಗೆಡವಿದ್ದಳು.

'ತನ್ನ ಗಂಡ ಕುಡುಕ, ಸಕಲ ಕಲಾವಲ್ಲಭ'.

ಗೆಳತಿಯೇ ಹೇಳಿಕೊಳ್ಳುವವರೆಗೆ ಶಾಂತಿಗೆ ಈ ಬಗ್ಗೆ ತಿಳಿದೂ ಇರಲಿಲ್ಲ. ಕೇಳಿದಾಗ ಆಶ್ಚರ್ಯ ಪಟ್ಟಿದ್ದಳು. ಮಕ್ಕಳ ವಿಚಾರದಲ್ಲೂ ಅವಳಿಗೆ ಸಾಂತ್ವನ ನೀಡುವ ಯಾವುದೇ ವರ್ತನೆಯನ್ನು ಗಂಡ ಎಂಬುವವನು ತೋರಿಸಿರಲಿಲ್ಲ, ಸದಾ ಕೆಟ್ಟ ಸಂಗದಲ್ಲಿ ಓಡಾಡುತ್ತಿದ್ದವನ ಬದುಕಿಗೆ ಯಾವುದೇ ನೈತಿಕದಂಡಗಳಿರಲಿಲ್ಲ. ಸುಧಾ ತನ್ನ ಸಂಸಾರದ ಹುಳುಕನ್ನು ಮೊದಲ ಬಾರಿಗೆ ಬಹಿರಂಗವಾಗಿ ಹೇಳಿಕೊಂಡಿದ್ದುದು ಶಾಂತಿ ಬಳಿಯೇ. ಆನಂತರವೇ ತನ್ನ ಮನೆಯವರಿಗೆ ತಿಳಿಸಿದ್ದುದು. ಅದಕ್ಕೂ ಮೊದಲು ಸಂಸಾರದ ಗುಟ್ಟನ್ನು ಗೋಪ್ಯವಾಗಿಟ್ಟುಕೊಂಡು ತಾನೇ ಸರಿಪಡಿಸಲು ಇನ್ನಿಲ್ಲದ ಪ್ರಯತ್ನ ಮಾಡಿ ಸೋತಿದ್ದಳು.

ಶಾಂತಿಗೆ ತಿಳಿಸಿದ ಹಾಗೆ ಸುಧಾ ಸಂಸಾರದಲ್ಲಿ ಸಂತೋಷವಾಗಿರಲಿಲ್ಲ. ಅವಳ ಗಂಡ ಪ್ರತಿ ದಿನ ಕುಡಿಯದೆ ಮನೆಗೆ ಬರುತ್ತಿರಲಿಲ್ಲ. ಜಗಳ, ಸಂಧಾನ, ಬುದ್ಧಿ ಹೇಳುವುದು ಎಲ್ಲ ನಡೆದರೂ ಅವಳ ಗಂಡ ದಾರಿಗೆ ಬಂದಿರಲಿಲ್ಲ. ಗಂಡ ಹೆಂಡಿರಿಬ್ಬರಿಗೂ ದುಡಿಮೆಯಿದ್ದು, ಮಗಳಿದ್ದ ಕಾರಣ ಮದುವೆ ಮುರಿಯದೆ ಹಾಗೇ ಉಳಿದಿತ್ತು. ಇತ್ತೀಚೆಗಿನ ಹತ್ತು ವರ್ಷಗಳಿಂದ ಗಂಡನನ್ನು ದೈಹಿಕವಾಗಿ ಇರಲಿ, ಮಾನಸಿಕವಾಗಿ ಕೂಡ ಹತ್ತಿರ ಸೇರಿಸಿಲ್ಲ ಎಂದು ಸುಧಾ ಹೇಳಿದ್ದ ನೆನಪು ಶಾಂತಿಗಿತ್ತು.

ದಾರಿಗೆ ಬರದ ಗಂಡನನ್ನು ಬಿಟ್ಟುಬಿಡುವಂತೆ ಶಾಂತಿ ಆಗ ಸುಧಾಳಿಗೆ ಸಲಹೆ ಕೊಟ್ಟಿದ್ದಳು. ಅದು ಹತ್ತು ವರ್ಷಗಳ ಹಿಂದೆ. ಆಗ ಸುಧಾಳ ಮಗಳಿಗಿನ್ನೂ ಚಿಕ್ಕ ವಯಸ್ಸು. ಸುಧಾಳಿಗಿನ್ನೂ ಆಗ ವಯಸ್ಸಿತ್ತು. ಕೆಲಸ–ದುಡಿಮೆ ಎರಡೂ ಇದ್ದವು. ಬೇರೆ ಯಾರಾದರೂ ಒಳ್ಳೆಯವರು ಸಿಗಬಹುದು, ಮೊದಲಿಗೆ ಡೈವೋರ್ಸ್ ತಗೋ ಎಂದಿದ್ದಳು. ಅವಳು ಒಂಟಿಯಾಗಿದ್ದರೆ ಇತರರಿಗೆ ಅವಳನ್ನು ಸಮೀಪಿಸಲಾದರೂ ಸಾಧ್ಯವಾಗುತ್ತದೆ ಎಂದಿದ್ದಳು.

ಶಾಂತಿಗೆ ಕಂಡ ಇವೆಲ್ಲ ಪ್ರಾಕ್ಟಿಕಲ್ ವಿಚಾರಗಳೇ ಸುಧಾಳನ್ನು ಹಾಗೆ ಮಾಡದಂತೆ ತಡೆದಿದ್ದವು. ಚಿಕ್ಕ ವಯಸ್ಸಿನ ಮಗಳ ಮನಸ್ಸಿನ ಮೇಲೆ ಪರಿಣಾಮವಾದೀತು ಎಂದು ಹಿಂತೆಗೆದಿದ್ದಳು. ತನಗಿನ್ನೂ ಪ್ರಾಯವಿದೆ, ಮುಂದೆ ಯೋಚಿಸುತ್ತೇನೆ ಅಂತ ನೆಪವೊಡ್ಡಿದ್ದಳು. ಅವಳ ವೃತ್ತಿಯಲ್ಲಿ ಅವಳು ಮಾಡುತ್ತಿದ್ದ ಹಲವು ಸಾಧನೆಗಳಿಗೆ ವಿಚ್ಛೇದನ ಮುಳುವಾದೀತು ಎಂಬ ಅಂಜಿಕೆಯೂ ಅವಳಿಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮಗಳೊಂದಿಗೆ ಹೇಗೋ ಬದುಕನ್ನು ಜಯಿಸುತ್ತೇನೆ ಎಂಬ ಬಲವಾದ ನಂಬಿಕೆಯೂ ಆಗ ಸುಧಾಳಲ್ಲಿತ್ತು. ಒಬ್ಬ ಗಂಡಸಿನ ಸಂಗವೇ ಸಾಕು, ಇನ್ನೊಬ್ಬನ ಅಗತ್ಯ ಖಂಡಿತ ಬೇಡ ಎನ್ನುವಂತೆ ವರ್ತಿಸಿದ್ದಳು.

ಶಾಂತಿಗೆ ತನ್ನ ಗೆಳತಿ, ಹೊರನೋಟಕ್ಕೆ ಅತ್ಯಾಧುನಿಕ ಎನ್ನುವ ಜೀವನ ನಿಲುವುಗಳನ್ನು ಹೊಂದಿದ್ದರೂ ಒಳಗೊಳಗೆ ಲೋಕ ವ್ಯವಸ್ಥೆಗೆ ಅಂಜುವವಳೇ ಎಂಬುದು ಮನದಟ್ಟಾಗಿತ್ತು. ಆಗಿನಿಂದ ಶಾಂತಿಯೂ ಡೈವೋರ್ಸ್ ವಿಚಾರವನ್ನೆತ್ತುತ್ತಿರಲಿಲ್ಲ.

ಬದಲಿಗೆ ಗೆಳತಿ ಒಂಟಿತನದಿಂದ ನರಳಿದಾಗೆಲ್ಲ ಕಿವಿಯಾಗಿದ್ದಳು. ತನ್ನನ್ನು ದುರದೃಷ್ಟ ಯಾಕೆ ಹೀಗೆ ಆಡಿಸುತ್ತಿದೆ ಎಂದು ಅವಳು ನೊಂದಾಗಲೆಲ್ಲ ಸುಧಾಳಿಗಿರುವ ಆರ್ಥಿಕ ಸ್ವಾತಂತ್ರ್ಯ, ಆರೋಗ್ಯ, ಒಳ್ಳೆಯ ಮಗಳು, ಕುಡಿದುಬಂದು ಹೇಗೋ ತೆಪ್ಪಗಿರುವ ಗಂಡನನ್ನು ನೆನಪಿಸಿ ಸಮಾಧಾನಿಸಿದ್ದಳು. ಅಡುಗೆ, ಮಕ್ಕಳು, ಕೆಲಸದ ಜೊತೆ ಜೊತೆಗೆ ರಾಜಕೀಯ, ಕ್ರಿಕೆಟ್, ಸಿನಿಮಾ ಅಂತೆಲ್ಲ ಮಾತಾಡಿಸುತ್ತ ಗೆಳತಿಯ ಒಂಟಿ ಬದುಕಿನಲ್ಲಿ ನೈತಿಕ ಸಂಗಾತಿಯಾಗಿ ಜೊತೆಗಿದ್ದಳು. ಬದುಕು ಇಬ್ಬರ ಸಮಯವನ್ನೂ ನುಂಗಿ ತನ್ನ ಪಾಡಿಗೆ ತಾನು ಓಡುತ್ತಲೇ ಇತ್ತು.

ಲಾಕ್‌ಡೌನ್, ಕೆಲಸದ ಒತ್ತಡ ಇತ್ಯಾದಿ ಅಂತ ಸುಧಾಳನ್ನು ನೋಡಿ ಎರಡು ವರ್ಷವಾಗಿ ಹೋಗಿತ್ತು. ಒಂದು ದಿನ 'ಹಾಯ್' ಎಂದು ಮನೆಗೆ ಬಂದ ಸುಧಾಳನ್ನು ನೋಡಿದ ಶಾಂತಿಗೆ ಆಶ್ಚರ್ಯವಾಗಿತ್ತು. ಸುಧಾ ಎಂದಿಗಂತಲೂ ಸುಂದರವಾಗಿ ಕಾಣುತ್ತಿದ್ದಳು. ಅವಳ ನಡಿಗೆಯಲ್ಲಿ ಹೊಸ ಬಳುಕಿತ್ತು. ಮುಖದಲ್ಲಿ ಉಗ್ಗುವ ಹೊಸಕಳೆ. ಚೆನ್ನಾಗಿ ಅಲಂಕರಿಸಿಕೊಂಡಿದ್ದ ಸುಧಾ ಹತ್ತು ವರ್ಷ ಕಡಿಮೆ ವಯಸ್ಸಿನವಳಂತೆ ಕಾಣುತ್ತಿದ್ದಳು. ಶಾಂತಿ ಅರೆಕ್ಷಣ ಚಕಿತಳಾದರೂ ಗೆಳತಿಯನ್ನು ನೋಡಿ ಖುಷಿಪಟ್ಟಿದ್ದಳು.

'ನೀನೇನು ಹರೆಯದ ಹುಡುಗಿಯಾಗಿಬಿಟ್ಟಿದ್ದೀಯ?' ಅಂತ ಗೆಳತಿಯನ್ನು ಆಲಂಗಿಸಿದ್ದಳು. ಇಬ್ಬರೂ ಕೂತು ಗಂಟೆಗಟ್ಟಲೆ ಮಾತಾಡಿದ್ದರು. ತಮ್ಮ ಕಾಲೇಜು ದಿನಗಳ ಚೇಷ್ಟೆ, ಹುಡುಗರು, ಆ ದಿನಗಳಲ್ಲಿ ಕುಳಿತು ಮದುವೆ, ಮಕ್ಕಳು ಅಂತೆಲ್ಲ ಮಾತಾಡಿ ನಗುತ್ತಿದ್ದ ದಿನಗಳನ್ನೆಲ್ಲ ನೆನೆದಿದ್ದರು.

ಆಗಲೇ ಸುಧಾ 'ತಾನೊಬ್ಬನನ್ನು ಪ್ರೀತಿಸುತ್ತೇನೆ' ಅಂತ ಹೇಳಿದ್ದುದು.

ಹಾಗೆ ಅವಳು ಹೇಳುತ್ತಿದ್ದಾಗ ಸುಧಾಳ ಭಾವನೆಗಳನ್ನು ಗುರುತಿಸುತ್ತಿದ್ದ ಶಾಂತಿಗೆ ಗೆಳತಿ ತನ್ನ ಬದುಕಿನಲ್ಲಿ ಅದುವರೆಗೆ ಕಳೆದು ಕೊಂಡಿದ್ದೇನೆಂಬುದರ ಸರ್ವವೂ ಕಂಡುಬಿಟ್ಟಿತ್ತು. ಸುಧಾ ಮದುವೆಯ ನಂತರ ಅವಳನ್ನೇ ಕಳೆದುಕೊಂಡಿದ್ದಳು. ಬದುಕುವ ಉತ್ಸಾಹವೇ ಅವಳಲ್ಲಿ ಬತ್ತಿಹೋಗಿತ್ತು. ತನ್ನ ನಗುವನ್ನು ಮರೆತಿದ್ದಳು. ಆಸಕ್ತಿಗಳನ್ನು ಕೈ ಬಿಟ್ಟಿದ್ದಳು. ತಾನೂ ಒಂದು ಹೆಣ್ಣೆಂಬುದನ್ನು ಮರೆತು ಮಗಳಿಗಾಗಿ, ಮನೆಗಾಗಿ, ಉಳಿದ ಸಮಯ ಕಳೆಯಲು ಬದುಕಿದ್ದಂತೆ ಇದ್ದಳು. ಅವಳಲ್ಲಿದ್ದ ಶುಷ್ಕತೆ ಅವಳ ಮನೆಯಲ್ಲೂ ತುಂಬಿಹೋಗಿತ್ತು. ಮಗಳ ಮುಂದೆ ತಾನು ಸಂತೋಷವಾಗೇ ಇದ್ದೇನೆ ಎನ್ನುವಂತೆ ತೋರಿಸಲು ಅವಳು ಮಾಡುತ್ತಿದ್ದ ಪ್ರಯತ್ನಗಳೂ ಮುಗಿಯುತ್ತ ಬಂದಿದ್ದವು. ಅವಳ ಮಾತುಗಳಲ್ಲಿ ಕರ್ತವ್ಯ, ಜವಾಬ್ದಾರಿ, ಸಾಧನೆ ಎನ್ನುವ ಮಾತುಗಳೇ ಹೆಚ್ಚು ತುಂಬಿರುತ್ತಿದ್ದವು. ಏನೇನಕ್ಕೋ ನಗುವ ಪ್ರಯತ್ನಗಳಿರುತ್ತಿದ್ದರೂ ಅದರ ಹಿಂದೆ ಎಲ್ಲೋ ಅಡಗಿರುತ್ತಿದ್ದ ದುಃಖದ ವಾಸನೆಯನ್ನು ಶಾಂತಿ ಯಾವತ್ತೂ ಗ್ರಹಿಸಿಬಿಡುತ್ತಿದ್ದಳು. ಸುಧಾ ಸಮಾಜದ ಮುಂದೆ ಜಂಟಿಯಾಗಿ ಸಂಸಾರ ಮಾಡಿಕೊಂಡಿರುವಂತೆ ನಟಿಸಿಕೊಂಡೇ ಗಾಢ ಒಂಟಿತನದಲ್ಲಿ ಉಡುಗಿಹೋಗಿದ್ದಳು.

ಇದೀಗ ಗೆಳತಿಯನ್ನು ಮತ್ತೊಮ್ಮೆ ಜೀವಂತ ಸ್ಥಿತಿಯಲ್ಲಿ ನೋಡುತ್ತಿರುವಂತೆ ಶಾಂತಿಗೆ ಭಾಸವಾಯಿತು. ಶಾಂತಿಗೆ ಮದುವೆಯಾಗಿ ಹದಿನೆಂಟು ವರ್ಷಗಳಾಗಿದ್ದವು. ಅಂದರೆ ಅವಳಿಗಿಂತ ಮೊದಲೇ ಮದುವೆಯಾಗಿದ್ದ ಸುಧಾಳಿಗೆ ಮದುವೆಯಾಗಿ ಇಪ್ಪತ್ತು ವರ್ಷಗಳಾಗಿದ್ದವು. ಅದೆಷ್ಟು ದೀರ್ಘ ಕಾಲ ಸುಧಾ ಕಷ್ಟಪಟ್ಟಿದ್ದಳು. ಮಾನಸಿಕವಾಗಿ ನೊಂದು ಕರಗಿಹೋಗಿದ್ದಳು.

ಇದೇ ಮೊದಲ ಬಾರಿಗೆ ಅವಳಲ್ಲಿ ಮತ್ತೊಮ್ಮೆ ಬದುಕುವ ಇಚ್ಛೆ ಅಥವಾ ಅವಳು ಬದುಕಿರುವ ಜೀವನೋತ್ಸಾಹ ಕಂಡುಬಂದಿದ್ದುದು. ಅದನ್ನು ಒಮ್ಮೆಲೆ ಜರಿಯಲು, ಹೀಗಳೆಯಲು, ತಪ್ಪೆಂದು ಹೇಳಲು ಶಾಂತಿ ತಯಾರಿರಲಿಲ್ಲ. ಮದುವೆಯಾದ ಮನುಷ್ಯನಿಂದ ಅವಳಿಗೆ ಬಾಳು ಸಿಕ್ಕಿರಲಿಲ್ಲ. ಆದರೆ, ಮದುವೆಯಾದ ವ್ಯಕ್ತಿಯೊಬ್ಬನ ಮೇಲಿನ ಗೆಳತಿಯ ಪ್ರೇಮವನ್ನು ಹೇಗೆ ಸಮರ್ಥಿಸಲು ಸಾಧ್ಯ? ಶಾಂತಿ ಗೊಂದಲಕ್ಕೆ ಬಿದ್ದಂತೆ ಸುಮ್ಮನಾಗಿದ್ದಳು.

ಅವಳ ಪೇಚಾಟ ನೋಡಿ ಸುಧಾ ಮತ್ತೆ ಕಿಲ ಕಿಲನೆಂದು ನಕ್ಕಳು.

'ಹೇ ಶಾಂತಿ, ನಮ್ಮದು, ಹೂಂ, ಬರೇ ನನ್ನದು ಅಂತಲೇ ಇಟ್ಟುಕೋ, ಮಾನಸಿಕ ಅವಲಂಬನೆ ಮಾತ್ರ ಕಣೇ. ಮೀರಾಬಾಯಿ, ಅಕ್ಕಮಹಾದೇವಿ, ಸಾವಿರಾರು ಗೋಪಿಕೆಯರು ತಮ್ಮ ಇನಿಯನನ್ನು